"Ban-lift"
7-8-2002

# ಕರ್ನಾಟಕ ಸರ್ಕಾರ

ಸಂಖ್ಯೆ:ಇಡಿ/137/ಎಸ್‌ಇಪಿ/2001

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:07ನೇ ಆಗಸ್ಟ್ 2002.

## -: ಸುತ್ತೋಲೆ :-

ವಿಷಯ: ಅನುದಾನಿತ ಖಾಸಗಿ ಶಿಕ್ಷಣ ಸಂಸ್ಥೆಗಳ ಪ್ರೌಢ ಶಾಲೆಗಳಲ್ಲಿನ ಖಾಲಿ ಹುದ್ದೆಗಳನ್ನು ತುಂಬಲು ಹಾಲಿ ಇರುವ ನಿರ್ಬಂಧವನ್ನು ಸಡಿಲಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ 112 ಪಿಎಂಸಿ 1999, ದಿನಾಂಕ:01/06/1999.
2) ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 52 ವಿವಿಧ 1999, ದಿನಾಂಕ:02/02/2000.
3) ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 200 ಪಿಎಂಸಿ 1999, ದಿನಾಂಕ:03/02/2000.
4) ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 65 ವಿವಿಧ 2000, ದಿನಾಂಕ:03/02/2001.
5) ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ 137 ಎಸ್‌ಇಪಿ 2001, ದಿನಾಂಕ:23/01/2002.
6) ನಿರ್ದೇಶಕರು, ಪ್ರೌಢ ಶಿಕ್ಷಣ, ಸಾ.ಶಿ.ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ:ಸಿ8(4)ಶಾಶಿಅ/ಹೆ.ಶಿ/1/2001-2002, ದಿನಾಂಕ:31/07/2001.

ರಾಜ್ಯದಲ್ಲಿನ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಹಾಗೂ ಶಿಕ್ಷಕರುಗಳ ಅನುಪಾತಕ್ಕಿಂತ ಹೆಚ್ಚುವರಿ ಶಿಕ್ಷಕರಿರುವುದನ್ನು ಮನಗಂಡು ಉಲ್ಲೇಖ (1)ರ ದಿನಾಂಕ:01/06/1999ರ ಸುತ್ತೋಲೆಯಲ್ಲಿ ಶಾಲೆಗಳ ತಪಾಸಣೆ ನಡೆಸಿ ಹೆಚ್ಚುವರಿ ಶಿಕ್ಷಕರನ್ನು ಗುರುತಿಸಲು ಹಾಗೂ ಅವರುಗಳನ್ನು ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ಸೇವಾ ಷರತ್ತು ಮತ್ತು ನಿಬಂಧನೆಗಳು) ನಿಯಮ 1999ರನ್ವಯ ಮರು ಹಂಚಿಕೆ ಮಾಡಲು ಉಲ್ಲೇಖ (3)ರ ದಿನಾಂಕ:03/02/2000ರ ಸುತ್ತೋಲೆಯಲ್ಲಿನ ಕಾರ್ಯಸೂಚಿಯನ್ವಯ 1999-2000ನೇ ಸಾಲಿನಲ್ಲಿ ಕ್ರಮ ಕೈಗೊಳ್ಳಲು ಸೂಚನೆಗಳನ್ನು ನೀಡಲಾಗಿತ್ತು. ಹಾಗೂ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿ ಇರುವ ಅಥವಾ ಇನ್ನು ಮುಂದೆ ಉದ್ಭವಿಸುವ ಶಿಕ್ಷಕರ ಹುದ್ದೆಗಳನ್ನು ಯಾವುದೇ ಕಾರಣಕ್ಕೂ ನೇರ ನೇಮಕಾತಿಯಿಂದ ತುಂಬತಕ್ಕದ್ದಲ್ಲವೆಂದು ನಿರ್ಬಂಧವನ್ನು ವಿಧಿಸಲಾಗಿತ್ತು.

2. ಅಲ್ಲದೆ ನಿಗದಿತ ಸಂಖ್ಯೆಗಿಂತ ಕಡಿಮೆ ವಿದ್ಯಾರ್ಥಿಗಳಿರುವ ಶಾಲೆಗಳನ್ನು ಮುಚ್ಚಲು ನಿಯಮಗಳನ್ನು ರೂಪಿಸಲಾಗಿದ್ದು, ಸಂಬಂಧಪಟ್ಟ ನಿರ್ದೇಶಕರು ತಮಗೆ ಪ್ರದತ್ತವಾದ ಅಧಿಕಾರದನ್ವಯ ವಿದ್ಯಾರ್ಥಿಗಳ ಸಂಖ್ಯೆಯನ್ನು ಮುಂದಿನ ಒಂದು ವರ್ಷದಲ್ಲಿ ಉತ್ತಮ ಪಡಿಸಿಕೊಳ್ಳುವ ಷರತ್ತಿನೊಂದಿಗೆ ಶಾಲೆಯನ್ನು ನಡೆಸಲು ಅನುಮತಿಯನ್ನು ನೀಡಲಾಗಿತ್ತು. ಅಂತಹ ಶಾಲೆಗಳನ್ನು ಒಳಗೊಂಡಂತೆ ಎಲ್ಲಾ ಖಾಸಗಿ ಅನುದಾನಿತ ಪ್ರೌಢ ಶಾಲೆಗಳನ್ನು ಪ್ರಸ್ತುತ 2001-2002ನೇ ಸಾಲಿನಲ್ಲಿಯೂ ತಪಾಸಣೆ ನಡೆಸುವುದು ಸೂಕ್ತವೆಂದು ನಿರ್ಧರಿಸಿ, ಉಲ್ಲೇಖ (5)ರಲ್ಲಿನ ದಿನಾಂಕ:23/01/2002ರ ಸುತ್ತೋಲೆಯಲ್ಲಿ ಈ ಬಗ್ಗೆ ಎಲ್ಲಾ ಅನುದಾನಿತ ಪ್ರೌಢ ಶಾಲೆಗಳನ್ನು ತಪಾಸಣೆ ನಡೆಸಿ ಹೆಚ್ಚುವರಿ ಶಿಕ್ಷಕರನ್ನು ಗುರುತಿಸಲು ಹಾಗೂ ಅವರುಗಳನ್ನು ಅಗತ್ಯ ಅನುದಾನಿತ ಖಾಲಿ

ಹುದ್ದೆಗಳಿಗೆ ಹಂಚಿಕೆ ಮಾಡಲು ಹಾಗೂ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರುವ ಶಾಲೆಗಳನ್ನು ಮುಚ್ಚಲು ವ ಅಲ್ಲಿಯ ಎಲ್ಲಾ ಶಿಕ್ಷಕರುಗಳನ್ನು ಹೆಚ್ಚುವರಿ ಎಂದು ಗುರ್ತಿಸಿ ಅಗತ್ಯ ಅನುದಾನಿತ ಖಾಲಿ ಹುದ್ದೆಗಳಿಗೆ ಪ ಹಂಚಿಕೆ ಮಾಡಲು ಕ್ರಮ ಕೈಗೊಂಡು ಅನಂತರ ಉಳಿಯುವ ಖಾಲಿ ಹುದ್ದೆಗಳನ್ನು ತುಂಬುವ ಅವಶ್ಯಕತೆಯ ನಿಗದಿತ ನಮೂನೆಯಲ್ಲಿ ವರದಿ ಸಲ್ಲಿಸುವಂತೆ ಸೂಚಿಸಲಾಗಿತ್ತು.

3. ಅದರಂತೆ 2001–2002ನೇ ಸಾಲಿನಲ್ಲಿ ನಡೆದ ತಪಾಸಣೆಯನ್ವಯ ಪ್ರೌಢ ಶಾಲೆಗಳಲ್ಲಿನ ಹೆಚ್ಚು ಶಿಕ್ಷಕರನ್ನು ಗುರುತಿಸಿ ಮರುಹಂಚಿಕೆಯ ನಂತರ ಉಳಿದಿರುವ ಪ್ರೌಢ ಶಾಲೆಗಳಲ್ಲಿನ ಖಾಲಿ ಹುದ್ದೆಗಳ ಅವಶ್ಯಕತೆಯನುಸಾರ ತುಂಬುವ ಬಗ್ಗೆ ನಿರ್ದೇಶಕರು ಉಲ್ಲೇಖ (6)ರ ಪತ್ರದಲ್ಲಿ ಸರ್ಕಾರಕ್ಕೆ ವರದಿಯ ಸಲ್ಲಿಸುತ್ತಾ ಆದೇಶ ಕೋರಿರುತ್ತಾರೆ. ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯನ್ನು ಗಮನದಲ್ಲಿರಿಸಿಕೊಂಡು ಪ ಶಾಲೆಗಳಲ್ಲಿನ ಖಾಲಿ ಇರುವ ಬೋಧಕ ಹುದ್ದೆಗಳನ್ನು ಅಗತ್ಯತೆಗನುಗುಣವಾಗಿ ತುಂಬಲು ಹಾಲಿ ಇ ನಿರ್ಬಂಧವನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ ಅನ್ವಯವಾಗುವಂತೆ ಎರಡು ವರ್ಷದವರೆಗೆ ಅಂ ದಿನಾಂಕ:06/08/2004ರ ವರೆಗೆ ರಾಜ್ಯದ ಅಲ್ಪ ಸಂಖ್ಯಾತ ವತಿಯಿಂದ ನಡೆಸಲ್ಪಡುತ್ತಿರುವ ಅನುದಾನಿತ ಪ ಶಾಲೆಗಳನ್ನೂ ಒಳಗೊಂಡಂತೆ ಎಲ್ಲಾ ಖಾಸಗಿ ಅನುದಾನಿತ ಪ್ರೌಢ ಶಾಲೆಗಳಲ್ಲಿನ ಮಂಜೂರಾತಿ ಹೊಂದಿದ ಖ ಇರುವ ಬೋಧಕ ಹುದ್ದೆಗಳನ್ನು ಮಾತ್ರ ನಿಯಮಗಳನ್ವಯ ಭರ್ತಿಮಾಡಲು ಈ ಕೆಳಕಂಡ ಷರತ್ತುಗೊಳಪ ಹಾಲಿ ಇರುವ ನಿರ್ಬಂಧವನ್ನು ಸಡಿಲಿಸಿದೆ.

ಅ. ಪ್ರೌಢ ಶಾಲೆಗಳಲ್ಲಿನ ಮಂಜೂರಾತಿ ಹೊಂದಿದ ಖಾಲಿ ಹುದ್ದೆಗಳನ್ನು ತುಂಬಲು ಆಡಳಿತ ಮಂಡಳಿಯವರು ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿಯನ್ನು ಕಡ್ಡಾಯವಾಗಿ ಪಡೆಯತಕ್ಕದ್ದು.

ಆ. ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ 137 ಎಸ್‌ಇಪಿ 2001, ದಿನಾಂಕ:23/01/2002ರ ಸೂಚನೆಯನ್ವಯ ನಡೆಸಿದ ತಪಾಸಣಾ ವೇಳೆಯಲ್ಲಿ ತಪಾಸಣಾ ತಂಡವು ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಅವಶ್ಯಕತೆ ಇದೆ ಎಂದು ಗುರುತಿಸಿ ಶಿಫಾರಸ್ಸು ಮಡಿರುವ ಮಂಜೂರಾತಿ ಹೊಂದಿದ ಅನುದಾನಿತ ಪ್ರೌಢ ಶಾಲೆಗಳ ಬೋಧಕ ವರ್ಗದ ಖಾಲಿ ಹುದ್ದೆಗಳಿಗೆ ಮಾತ್ರ ಸಕ್ಷಮ ಪ್ರಾಧಿಕಾರವು ಅನುಮತಿ ನೀಡತಕ್ಕದ್ದು. ಇನ್ನೂ ಉಲ್ಲೇಖ (5)ರ ದಿನಾಂಕ:23/01/2002ರ ಸುತ್ತೋಲೆಯ ಸೂಚನೆಗಳನ್ವಯ ತಪಾಸಣೆಯ ನಂತರದ ಅವಧಿಯಿಂದ ದಿನಾಂಕ:06/08/2004ರ ವರೆಗೆ ಉದ್ಭವವಾದಂತಹ / ಉದ್ಭವವಾಗುವಂತಹ ಮಂಜೂರಾತಿ ಹೊಂದಿದ ಖಾಲಿ ಹುದ್ದೆಗಳಿಗೆ ಸಂಬಂಧಿಸಿದಂತೆ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ (C.E.O) ಜಿಲ್ಲಾ ಪಂಚಾಯತ್ ಇವರು ಈ ಕೆಳಗೆ ನಮೂದಿಸಿರುವ ಸದಸ್ಯರನ್ನೊಳಗೊಂಡ ತಪಾಸಣಾ ತಂಡವನ್ನು ರಚಿಸಿ ಸದರಿ ತಂಡದ ವತಿಯಿಂದ ತಪಾಸಣೆ ನಡೆಸಿ ಅನುಬಂಧ-1ರಲ್ಲಿನ ಮಾಹಿತಿಯನುಸಾರ ವಿದ್ಯಾರ್ಥಿ ಹಾಜರಾತಿಗನುಗುಣವಾಗಿ ಹುದ್ದೆ ತುಂಬಲು ಅವಶ್ಯಕತೆ ಇರುವ ಬಗ್ಗೆ ಮಾಹಿತಿ ಪಡೆದು ಸಕ್ಷಮ ಪ್ರಾಧಿಕಾರಕ್ಕೆ ವರದಿ ನೀಡತಕ್ಕದ್ದು. ತದನಂತರ ವರದಿಯ ಆಧಾರದ ಮೇಲೆ ಅವಶ್ಯಕತೆ ಇರುವ ಹುದ್ದೆಗಳನ್ನು ತುಂಬಲು ಸಕ್ಷಮ ಪ್ರಾಧಿಕಾರಿ ಅನುಮತಿ ನೀಡತಕ್ಕದ್ದು.

(1) ಉಪ ಕಾರ್ಯದರ್ಶಿಗಳು, ಸಂಬಂಧಪಟ್ಟ ಜಿಲ್ಲಾ ಪಂಚಾಯತ್.
(2) ಸಂಬಂಧಪಟ್ಟ ಉಪ ನಿರ್ದೇಶಕರು.
(3) ಅದೇ ವಲಯದ ಅಥವಾ ಅಕ್ಕಪಕ್ಕದ ವಲಯದ ಸರ್ಕಾರಿ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯರು.

ಇ. ನಿರ್ದೇಶಕರು ಪ್ರೌಢ ಶಿಕ್ಷಣ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಪತ್ರ ಸಂಖ್ಯೆ:ಸಿ8(4)ಶಾಶಿಅ/ಹೆ.ಶಿ/1/2001–2002, ದಿನಾಂಕ:31/07/2002ರಲ್ಲಿ ತಿಳಿಸಿರುವಂತೆ ಹೆಚ್ಚುವರಿ ಶಿಕ್ಷಕರ ಸ್ಥಳ ಸೂಚಿತ ಪ್ರಕ್ರಿಯೆಯಲ್ಲಿ ನೇಮಕಾತಿ ಆದೇಶ ನೀಡಲು ಮತ್ತು ಮರು ಹಂಚಿಕೆ ಮಾಡಲಾದ ಅಭ್ಯರ್ಥಿಯನ್ನು ನಿರಾಕರಿಸಿದ ಆಡಳಿತ ಮಂಡಳಿಗಳ ಶಾಲೆಗಳಲ್ಲಿರುವ ಸದರಿ ಹುದ್ದೆಗಳನ್ನು ತುಂಬಲು ಅನುಮತಿ ನೀಡತಕ್ಕದ್ದಲ್ಲ. ಮತ್ತು ಅಂತಹ ಹುದ್ದೆಗಳನ್ನು ಶಾಶ್ವತ ಅನುದಾನ ರಹಿತ ಹುದ್ದೆಗಳೆಂದು ಪರಿಗಣಿಸತಕ್ಕದ್ದು. ಅಲ್ಲದೆ 2000–2001 ಮತ್ತು 2001–

2002ರಲ್ಲಿ ಹೆಚ್ಚುವರಿಯೆಂದು ಗುರುತಿಸಿ ರದ್ದುಪಡಿಸಿರುವ ಈ ಕೆಳಕಂಡ ವರ್ಗಗಳ ಹುದ್ದೆಗಳನ್ನು ತುಂಬಲು ಅನುಮತಿ ನೀಡತಕ್ಕದ್ದಲ್ಲ.

(1) ಆಡಳಿತ ಮಂಡಳಿಗಳೇ ಅನುಮತಿ ಪಡೆದು ಮರು ಹೊಂದಾಣಿಕೆ ಮಾಡಿಕೊಂಡ ಪರಿಣಾಮವಾಗಿ ಉಳಿದಿರುವ ಹೆಚ್ಚುವರಿ ಹುದ್ದೆಗಳು.

(2) ನಿರ್ದೇಶಕರು (ಪ್ರೌಢ ಶಿಕ್ಷಣ) ಇವರು ಹೊರಡಿಸಿದ ಮರುಹೊಂದಾಣಿಕೆ ಆದೇಶಗಳಲ್ಲಿ ಸೇರಿಸಿರುವ ಹೆಚ್ಚುವರಿ ಹುದ್ದೆಗಳು.

(3) ನಿಯಮ 12ರಡಿ ಅನುಮತಿ ಪಡೆದು ಬೇರೆ ಆಡಳಿತ ಮಂಡಳಿಗಳಿಗೆ ಹೆಚ್ಚುವರಿ ಶಿಕ್ಷಕರುಗಳನ್ನು ಮರು ಹೊಂದಾಣಿಕೆ ಮಾಡಿದ ಪರಿಣಾಮವಾಗಿ ಉಳಿದಿರುವ ಹೆಚ್ಚುವರಿ ಹುದ್ದೆಗಳು.

(4) ಹೆಚ್ಚುವರಿ ಶಿಕ್ಷಕರೆಂದು ಗುರುತಿಸಿದ ನಂತರ ಸ್ವಯಂ ನಿವೃತ್ತಿ ಪಡೆದ ಪರಿಣಾಮವಾಗಿ ಉಳಿದಿರುವ ಹೆಚ್ಚುವರಿ ಹುದ್ದೆಗಳು.

ಈ. ಬೋಧಕ ವರ್ಗದ ಖಾಲಿ ಹುದ್ದೆಗಳನ್ನು ತುಂಬಲು ಅನುಮತಿ ನೀಡುವ ಮುನ್ನಾ ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆಯನ್ನು ತಪಾಸಣಾ ವರದಿಯನುಸಾರ ಪರಿಶೀಲಿಸಿ ಪ್ರಸ್ತುತ ಅಧಿಸೂಚನೆ ಸಂಖ್ಯೆ:ಇಡಿ 52 ವಿವಿಧ 1999, ದಿನಾಂಕ:02/02/2000ದ ಅನುಬಂಧ-IV ರಲ್ಲಿ ಸೂಚಿಸಿರುವ ಮಾದರಿ ಸಿಬ್ಬಂದಿಯ ರಚನೆಯೊಳಗಿರುವ ಹುದ್ದೆಗಳನ್ನು ಮಾತ್ರ ತುಂಬಲು ಅನುಮತಿ ನೀಡತಕ್ಕದ್ದು.

ಉ. ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 52 ವಿವಿಧ 1999 ದಿನಾಂಕ:02/02/2002ರ ಅನುಬಂಧ-1ರನ್ವಯ ಆಡಳಿತ ಮಂಡಳಿ ಆಯ್ಕೆ ಪ್ರಕ್ರಿಯೆಯನ್ನು ಪೂರೈಸಿ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದ ಮುಂದೆ ಪ್ರಸ್ತಾವನೆ ಸಲ್ಲಿಸತಕ್ಕದ್ದು. ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರವು ಪ್ರಸ್ತಾವನೆಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 65 ವಿವಿಧ 2000, ದಿನಾಂಕ:03/02/2001ರಲ್ಲಿ ರಚಿಸಲಾಗಿರುವ ಸ್ಕ್ರೀನಿಂಗ್ ಕಮಿಟಿಯ ಮುಂದೆ ಮಂಡಿಸತಕ್ಕದ್ದು. ಸ್ಕ್ರೀನಿಂಗ್ ಕಮಿಟಿಯ ನಿರ್ಣಯದಂತೆ ಪ್ರಾಧಿಕಾರವು ಅನುಮೋದನೆ ಅಥವಾ ತಿರಸ್ಕಾರ ಆದೇಶವನ್ನು ಹೊರಡಿಸಿ ಸಂಬಂಧಪಟ್ಟ ಆಡಳಿತ ಮಂಡಳಿಗೆ ತಿಳಿಸತಕ್ಕದ್ದು. ಈ ಪ್ರಕ್ರಿಯೆಯನ್ನು ಮೇಲೆ ಉಲ್ಲೇಖಿಸಿರುವ ದಿನಾಂಕ:03/01/2001ರ ಅಧಿಸೂಚನೆಯಲ್ಲಿ ನಿಗಧಿಪಡಿಸಿರುವಂತೆ ಆಡಳಿತ ಮಂಡಳಿಯಿಂದ ಪ್ರಸ್ತಾವನೆಯನ್ನು ಸ್ವೀಕರಿಸಿದ ದಿನಾಂಕದಿಂದ 3 ತಿಂಗಳ ಒಳಗಾಗಿ ಪೂರ್ಣಗೊಳಿಸತಕ್ಕದ್ದು. ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಆದೇಶ ಪಡೆದ ನಂತರವೇ ಆಡಳಿತ ಮಂಡಳಿಯು ನೇಮಕಾತಿ ಆದೇಶವನ್ನು ಹೊರಡಿಸತಕ್ಕದ್ದು. ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೆ ನೇಮಕಾತಿ ಆದೇಶ ಹೊರಡಿಸಿದಲ್ಲಿ ಅದು ಅಸಿಂಧುವಾಗುತ್ತದೆ.

ಊ. ವಿದ್ಯಾರ್ಥಿಗಳ ಶೈಕ್ಷಣಿಕತೆಗೆ ತೊಂದರೆಯಾಗುವುದನ್ನು ತಪ್ಪಿಸುವ ಸಲುವಾಗಿ ನಿವೃತ್ತಿ ಪ್ರಕರಣಗಳಿಂದ ಉದ್ಭವಾಗುವ ಖಾಲಿ ಹುದ್ದೆಗಳನ್ನು ಆಡಳಿತ ಮಂಡಳಿಯು 3 ತಿಂಗಳ ಮುಂಚಿತವಾಗಿ ಗುರುತಿಸಿ ಅಂತಹ ಹುದ್ದೆಗಳನ್ನು ತುಂಬಲು ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ನಿಯಮಗಳನ್ವಯ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದ ಮುಂದೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು. ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರವು ಸದರಿ ಪ್ರಸ್ತಾವನೆಯನ್ನು ಸ್ಕ್ರೀನಿಂಗ್ ಕಮಿಟಿಯ ಮುಂದೆ ಮಂಡಿಸಿ ಅದರ ನಿರ್ಣಯವನ್ನು ಪಡೆದು ನಿಗಧಿಪಡಿಸಿರುವ ಕಾಲಮಿತಿಯೊಳಗೆ ಆದೇಶಹೊರಡಿಸತಕ್ಕದ್ದು. ಅನಂತರ ಆಡಳಿತ ಮಂಡಳಿಯು ನಿವೃತ್ತಿಯಿಂದ ಹುದ್ದೆ ತೆರವಾದ ನಂತರ ನೇಮಕಾತಿ ಆದೇಶವನ್ನು ಹೊರಡಿಸತಕ್ಕದ್ದು.

ಮು. ಅಭ್ಯರ್ಥಿಗಳ ಆಯ್ಕೆ ಹಾಗೂ ನೇಮಕಾತಿ ಪ್ರಕ್ರಿಯೆಯಲ್ಲಿ ಮೀಸಲಾತಿ ಉಲ್ಲಂಘನೆ ಹಾಗೂ ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆ, ವಯೋಮಿತಿ ಹಾಗೂ ಇತ್ಯಾದಿ ಷರತ್ತುಗಳ ಉಲ್ಲಂಘನೆಯಾಗಿದ್ದಲ್ಲಿ ಅಂತಹ ಅನುದಾನಿತ ಸಂಸ್ಥೆಗಳ ಆಡಳಿತ ಮಂಡಳಿಗಳ ವಿರುದ್ಧ ಕಾನೂನಿನ್ವಯ ಸಂಬಂಧಪಟ್ಟ ಉಪ ನಿರ್ದೇಶಕರುಗಳು ಕ್ರಮ ಜರುಗಿಸತಕ್ಕದ್ದು. ಮತ್ತು ಅಂತಹ ಹುದ್ದೆಗಳನ್ನು ಶಾಶ್ವತ ಅನುದಾನ ರಹಿತ ಹುದ್ದೆಗಳೆಂದು ಪರಿಗಣಿಸತಕ್ಕದ್ದು.

4. ಖಾಸಗಿ ಪ್ರಾಥಮಿಕ ಶಾಲೆಗಳಲ್ಲಿ ಎರಡುಸಾವಿರ ಸಂಖ್ಯೆಗಿಂತ ಮೇಲ್ಪಟ್ಟು ಹೆಚ್ಚುವರಿ ಶಿಕ್ಷಕರು ಉಳಿದಿದ್ದು, ಪ್ರಾಥಮಿಕ ಅನುದಾನಿತ ಸಂಸ್ಥೆಗಳಲ್ಲಿನ ನೇರ ನೇಮಕಾತಿ ಹುದ್ದೆಗಳ ಮೇಲೆ ವಿಧಿಸಿರುವ ನಿರ್ಬಂಧವನ್ನು ಮುಂದುವರಿಸತಕ್ಕದ್ದು.

(ಸಿದ್ದಲಿಂಗಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.

ಇವರಿಗೆ:

01) ಎಲ್ಲಾ ಜಿಲ್ಲಾ ಪಂಚಾಯತಿನ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು.
02) ಎಲ್ಲಾ ಜಿಲ್ಲಾ ಪಂಚಾಯತಿನ ಉಪ ಕಾರ್ಯದರ್ಶಿಗಳು.
03) ಆಯುಕ್ತರು. ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು – 560001.
04) ನಿರ್ದೇಶಕರು, ಪ್ರೌಢ ಶಿಕ್ಷಣ / ಪ್ರಾಥಮಿಕ ಶಿಕ್ಷಣ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಕೆ.ಆರ್.ಸರ್ಕಲ್, ಬೆಂಗಳೂರು – 560001.
05) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ವಿಭಾಗೀಯ ಸಹ ನಿರ್ದೇಶಕರುಗಳಿಗೆ.
06) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳಿಗೆ
07) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿಗಳು.
08) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ, ಇವರ ಆಪ್ತ ಕಾರ್ಯದರ್ಶಿಗಳಿಗೆ.
09) ಸರ್ಕಾರದ ಉಪ ಕಾರ್ಯದರ್ಶಿಗಳು–1,2, ಮತ್ತು 3, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು–1.
10) ಶಿಕ್ಷಣ ಇಲಾಖೆಯ ಎಲ್ಲಾ ಅಧೀನ ಕಾರ್ಯದರ್ಶಿಗಳು, ಮತ್ತು ಶಾಖೆಗಳು.
11) ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ–8).
12) ಅಧೀನ ಕಾರ್ಯದರ್ಶಿ, ಸಿ.ಆ.ಸು.ಇಲಾಖೆ (ಸೇವೆಗಳು–1). (13) ರಕ್ಷಾ ಕಡತ / ಹೆಚ್ಚುವರಿ ಪ್ರತಿ.